ಶ್ರೀ ಎಸ್. ಶಿವಣ್ಣ :– ಮಾನ್ಯ ಅಧ್ಯಕ್ಷರೇ, ...

ಅಧ್ಯಕ್ಷರು : – ಅವರ ಹತ್ತಿರ ಇರತಕ್ಕಂಥ ಮಾಹಿತಿಯನ್ನು ಅವರು ಹೇಳಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ರಾಜ್ಯದಲ್ಲಿರುವ ಪೇಪರ್ ತಯಾರಿಕಾ ಕೈಗಾರಿಕೆಗಳು :

243 (3416) ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ (ಬೆಳ್ಳಾವಿ) :– ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪೇಪರ್ ತಯಾರಿಕಾ ಕೈಗಾರಿಕೆಗಳೆಷ್ಟು;

ಆ) ಇವುಗಳಲ್ಲಿ ಖಾಸಗಿ ಕೈಗಾರಿಕೆಗಳೆಷ್ಟು; ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳೆಷ್ಟು (ವಿವರ ನೀಡಿ);

ಇ) ಸರ್ಕಾರಿ ಸ್ವಾಮ್ಯದ ಪೇಪರ್ ತಯಾರಿಕಾ ಕೈಗಾರಿಕೆಗಳೆಲ್ಲವೂ ಕಾರ್ಯ ನಿರ್ವಹಿಸುತ್ತಿವೆಯೇ; ಹಾಗೂ ಅವುಗಳು ಲಾಭದಲ್ಲಿ ನಡೆಯುತ್ತಿವೆಯೇ;

ಈ) ನಷ್ಟದಲ್ಲಿ ನಡೆಯುತ್ತಿದ್ದಲ್ಲಿ ಕಾರಣಗಳನ್ನು ನೀಡುವುದು;

ಉ) ಇವುಗಳು ಲಾಭದಾಯಕವಾಗಿ ನಡೆಸುವಂತೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು) :

ಅ) 17

ಆ) ಹದಿನಾರು ಖಾಸಗಿ ಕೈಗಾರಿಕೆಗಳಿದ್ದು, ಒಂದು ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) ಹೌದು, ಆದರೆ ಲಾಭ ಗಳಿಸುತ್ತಿಲ್ಲ.

ಈ) * ಹೆಚ್ಚಿನ ಉತ್ಪಾದನಾ ವೆಚ್ಚ
* ಕಡಿಮೆ ಉತ್ಪಾದಕತೆ,
* ತಾಂತ್ರಿಕ ಉನ್ನತೀಕರಣ ಇಲ್ಲದಿರುವುದು.
* ಕಡಿಮೆ ಬೆಲೆಯಲ್ಲಿ ನ್ಯೂಸ್‌ಪ್ರಿಂಟ್‌ನ್ನು ಆಯಾತ ಗೊಳಿಸುವುದು.

ಉ) ಮೈಸೂರು ಪೇಪರ್ ಮಿಲ್ಸ್‌ನ ಪುನಶ್ಚೇತನ/ ಪುನರ್‌ರಚನೆ ಕುರಿತಾದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ವಿಧಾನಸಭೆಯ ಸದಸ್ಯರಾದ ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ

ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 341ಕ್ಕೆ ಅನುಬಂಧ

ಕಾರ್ಯ ನಿರ್ವಹಿಸುತ್ತಿರುವ ಖಾಸಗಿ ಕೈಗಾರಿಕೆಗಳು :

1. ದಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್, ದಾಂಡೇಲಿ.
2. ಶ್ರೇಯಸ್ ಪೇಪರ್ ಪ್ರೈ.ಲಿ; ಕೆರವಾಡ, ದಾಂಡೇಲಿ.
3. ಶ್ರೀನಿಧಿ ಪೇಪರ್ ಮಿಲ್ಸ್ (ಪ್ರೈ) ಲಿ; ದಾಂಡೇಲಿ.
4. ಮೆ॥ ಪೇಪರ್ ಪ್ಯಾಕೇಜಿಂಗ್, ಮಂಡ್ಲಿ, ಕಲ್ಲೂರು, ಶಿವಮೊಗ್ಗ.
5. ದಿ ಸೌತ್ ಇಂಡಿಯಾ ಪೇಪರ್ ಮಿಲ್ಸ್, ಚಿಕ್ಕಾಯಣ ಚತ್ರ, ನಂಜನಗೂಡು.
6. ಮೆ॥ ತುಂಗಭದ್ರಾ ಪಲ್ಪ್ ಅಂಡ್ ಬೋರ್ಡ್ಸ್ ಲಿ; ಮುನಿರಾಬಾದ್.
7. ಕಾರಂಜಾ ಪೇಪರ್ ಮಿಲ್ಸ್ ಪ್ರೈ.ಲಿ; ಹುಮನಾಬಾದ್.
8. ಮೆ॥ ಮನಯಾಲಕ್ಸ್ ಪೇಪರ್ ಮಿಲ್ಸ್ ಪ್ರೈ.ಲಿ; ಯಡಿಯೂರು.
9. ಭದ್ರಾ ಪ್ಯಾಕೇಡ್ಸ್ ಪ್ರೈ.ಲಿ; ಬೊಮ್ಮನಹಳ್ಳಿ, ಭದ್ರಾವತಿ.
10. ಗಾಂಪ ಅಲ್ಕೋಟ್ಸ್ ಲಿ; ಬೀದರ್.
11. ಸಾಫಲ್ಯ ಇಂಡಸ್ಟ್ರೀಸ್ ಪ್ರೈ. ಲಿ; ಶಹಾಪುರ್.

ಸ್ಥಗಿತಗೊಂಡಿರುವ ಖಾಸಗಿ ಕೈಗಾರಿಕೆಗಳು :

12. ಮೆ॥ ಕಾವೇರಿ ಪೇಪರ್ ಮಿಲ್ಸ್, ಸತ್ಯಗಾಲ, ಕೊಳ್ಳೇಗಾಲ ತಾ॥
13. ಮೆ॥ ರ್ಯಾಪೇಡ್ಸ್ ಲಿ; ಸತ್ಯಗಾಲ, ಕೊಳ್ಳೇಗಾಲ ತಾ॥
14. ಯಲ್ಲಲಿಂಗ ಪೇಪರ್ ಮಿಲ್ಸ್, ಬಸವಕಲ್ಯಾಣ, ಬೀದರ್.
15. ಅನ್ನಪೂರ್ಣ ಪೇಪರ್ ಲಿ; ಗೋದಿಕಾವ, ಕೆಂಗೇರಿ.
16. ಐಶ್ವರ್ಯ ಪೇಪರ್ ಪ್ರೈ.ಲಿ; ಭಾಲ್ಕಿ, ಬೀದರ್.

ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳು :

17. ಮೈಸೂರು ಪೇಪರ್ ಮಿಲ್ಸ್ ಲಿ: ಪೇಪರ್ ಟೌನ್, ಭದ್ರಾವತಿ.

ಶ್ರೀ ಕ್ಯಾತ್‌ಸಂದ್ರ ಎನ್.ರಾಜಣ್ಣ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರ ಬಂದಿದೆ. ಇದರಲ್ಲಿ ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಕಾರಣಗಳನ್ನು ತಿಳಿಸಿದ್ದಾರೆ. ಹೆಚ್ಚಿನ ಉತ್ಪಾದನಾ ವೆಚ್ಚ, ಕಡಿಮೆ ಉತ್ಪಾದಕತೆ, ತಾಂತ್ರಿಕ ಉನ್ನತೀಕರಣ ಇಲ್ಲದಿರುವುದು ಮತ್ತು ಕಡಿಮೆ ಬೆಲೆಯಲ್ಲಿ ನ್ಯೂಸ್ ಪ್ರಿಂಟ್‌ನ್ನು ಆಯಾತಗೊಳಿಸುವುದು ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಕಾರಣಗಳೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಈ ಒಂದು ಕಾರಣಗಳ ಹಿನ್ನಲೆಯಲ್ಲಿ ಅದು ನಷ್ಟದಲ್ಲಿ ನಡೆಯುತ್ತಿದೆ. ಇಲ್ಲಿ ಹೆಚ್ಚಿನ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲಿಕ್ಕೆ ಮತ್ತು low productivity ಇರತಕ್ಕಂಥಹದ್ದನ್ನು overcome ಮಾಡಲಿಕ್ಕೆ ಸರ್ಕಾರ ಯಾವ ರೀತಿಯಲ್ಲಿ ಆಲೋಚನೆ ಮಾಡಿದೆ? ಇದರ ಪುನಶ್ಚೇತನಗೊಳಿಸುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಎಷ್ಟು ಸಮಯದ ಒಳಗಡೆ ಆ ಸಂಬಂಧ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :– ಮಾನ್ಯ ಅಧ್ಯಕ್ಷರೇ, ಹೆಚ್ಚಿನ ಉತ್ಪಾದನಾ ವೆಚ್ಚ ಕಡಿಮೆ ಮಾಡಬೇಕು ಎಂದರೆ VRS ಕೊಟ್ಟು ಕೆಲವು ಕಾರ್ಮಿಕರನ್ನು ನಾವು ಕಳುಹಿಸಬೇಕಾಗುತ್ತದೆ, ನಿವೃತ್ತಿಯನ್ನು ಮಾಡಬೇಕಾಗುತ್ತದೆ. ಸರ್ಕಾರದ ಮುಂದೆ ಇರತಕ್ಕ option ನಲ್ಲಿ ಇದೊಂದಾಗಿದೆ. ಅಲ್ಲಿ productivity ಸಹಿತ ಕಡಿಮೆಯಾಗಿರತಕ್ಕದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮೈಸೂರು ಪೇಪರ್ ಮಿಲ್ಸ್ ಅನ್ನು ನಾವು revive ಮಾಡಬೇಕಾದರೆ, ಕನಿಷ್ಟ 465 ಕೋಟಿ ರೂಪಾಯಿಗಳ ಬಂಡವಾಳ ನಮಗೆ ಬೇಕಾಗುತ್ತದೆ. Rs. 465 crores is the money for revival of MPM. MPM ಮಾನ್ಯ ವಿಶ್ವೇಶ್ವರಯ್ಯನವರಿಂದ 1936ರಲ್ಲಿ ಪ್ರಾರಂಭವಾಗಿರತಕ್ಕಂಥ ಕಾರ್ಖಾನೆಯಾಗಿದೆ. ಇದನ್ನು ಉಳಿಸಿಕೊಳ್ಳಲು ಸರ್ಕಾರಕ್ಕೆ ಬಹಳ ಇಷ್ಟ ಇದೆ. ನ್ಯೂಸ್ ಪ್ರಿಂಟ್ ಅನ್ನು import ಮಾಡಿಕೊಳ್ಳಬೇಕು ಎಂಬ ತೀರ್ಮಾನವನ್ನು ಮಾಡಿದ ಮೇಲೆ ಇಲ್ಲಿ ತೊಂದರೆಯಾಗಿದೆ. ಇಲ್ಲಿ ಬಹಳ ಮುಖ್ಯವಾಗಿ ನ್ಯೂಸ್ ಪ್ರಿಂಟ್ ಅನ್ನೇ produce ಮಾಡುತ್ತಿದ್ದಾರೆ. ನ್ಯೂಸ್ ಪ್ರಿಂಟ್ ಕಡಿಮೆ ವೆಚ್ಚದಲ್ಲಿ ಹೊರಗಡೆ ದೇಶಗಳಿಂದ ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ನಾವು ನ್ಯೂಸ್ ಪ್ರಿಂಟ್ ಅನ್ನು ಬಿಟ್ಟು ಬೇರೆ ಪೇಪರ್ ಅನ್ನು ಪ್ರಿಂಟ್ ಮಾಡಲಿಕ್ಕೆ ಹೋಗಬೇಕಾಗುತ್ತದೆ. ಅದಕ್ಕೋಸ್ಕರವಾಗಿ ನಾವು investment ಮಾಡಬೇಕಾಗುತ್ತದೆ. ಅಲ್ಲಿರುವ machineryಅನ್ನು modernise ಮಾಡಬೇಕಾಗುತ್ತದೆ. ಒಂದು ಸರ್ಕಾರ 465 ಕೋಟಿ ರೂಪಾಯಿಗಳಲ್ಲಿ ಇದನ್ನು ಮಾಡಲಿಕ್ಕೆ ಸಾಧ್ಯ ಆಗುತ್ತದೆಯೇ ಎಂಬುದರ ಬಗ್ಗೆಯೂ ಸಹ ಯೋಚನೆಯನ್ನು ಮಾಡಬೇಕಾಗುತ್ತದೆ. ನಾಲ್ಕೈದು alternatives ಅನ್ನು ಸರ್ಕಾರ ಈ ದಿಸೆಯಲ್ಲಿ ಇಟ್ಟುಕೊಂಡಿದೆ. ಬಂಡವಾಳವನ್ನು ಹೂಡತಕ್ಕಂಥದ್ದು ಒಂದು option. ಅದನ್ನು ನಾನು ಕಮಿಟ್ ಮಾಡುತ್ತಿಲ್ಲ. ಅದೊಂದು option ಅಷ್ಟೇ

ಎರಡನೆಯದಾಗಿ, ಶೇರುಗಳನ್ನು ಖಾಸಗಿಯವರಿಗೆ ಭಾಗಶಃ ಕೊಡುವಂತಹ option ಒಂದನ್ನೂ ಸಹಿತ ನಾವು ಇಟ್ಟುಕೊಂಡಿದ್ದೇವೆ. ಪ್ರತಿ ವರ್ಷವೂ ಕೂಡ taxation ವಿಚಾರದಲ್ಲಿ ಕೆಲವೊಂದು ರಿಯಾಯಿತಿಗಳನ್ನು ಆರ್ಥಿಕ ಇಲಾಖೆಯವರು ಕಾರ್ಖಾನೆಗೆ ಕೊಡುತ್ತಿದ್ದಾರೆ. ಅದನ್ನೂ ಕಂಟಿನ್ಯೂ ಮಾಡಿಕೊಂಡು ಹೋಗಬೇಕು ಎನ್ನತಕ್ಕಂಥದ್ದೂ ಸಹ ಇದೆ. ಇದೆಲ್ಲವೂ ಸಹಿತ overcome ಮಾಡುವುದಕ್ಕಿಂತ ಹೆಚ್ಚಾಗಿ, ಬಹಳ ಮುಖ್ಯವಾಗಿ, ಇದನ್ನು ಸರ್ಕಾರಿ ಸ್ವಾಮ್ಯದಲ್ಲಿ ಉಳಿಸಿಕೊಳ್ಳಬೇಕೋ? ಅಥವಾ ಖಾಸಗೀಕರಣದ ಜೊತೆಯಲ್ಲಿ, ಮೈಸೂರಿನಲ್ಲಿ ಇರತಕ್ಕಂಥ ವಿಕ್ರಾಂತ್ ಟೈರ್ ಫ್ಯಾಕ್ಟರಿಯನ್ನು ಯಾವ ರೀತಿಯಾಗಿ ಬದುಕಿಸಿದೆವೋ, ಆ ರೀತಿ ಬದುಕಿಸಲಿಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ. ಸಚಿವ ಸಂಪುಟದ ಉಪ ಸಮಿತಿಯೊಂದು ಇದಕ್ಕೋಸ್ಕರ ರಚನೆಯಾಗಿದೆ. ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಯಲ್ಲಿ ಇದು ಇದೆ. ಇದಕ್ಕೆ ಎಷ್ಟು ಸಮಯ ಬೇಕಾಗುತ್ತದೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಬಹುಶಃ ಇನ್ನು 3–4 ತಿಂಗಳೊಳಗಡೆ, ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು, MPM ಅನ್ನು ಪುನಶ್ಚೇತನಗೊಳಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಸದರಿ ಕಾರ್ಖಾನೆಯನ್ನು ನಾವು ಡಿವೈಡ್ ಮಾಡಿ, ಪೇಪರ್ ಮಿಲ್ಸ್ ಒಂದನ್ನು ಮಾಡಿ, ಶುಗರ್ ಫ್ಯಾಕ್ಟರಿ ಒಂದನ್ನು ಮಾಡಿ, co-generation ಒಂದನ್ನು ಮಾಡಿ, ಈ ರೀತಿಯಾಗಿ ಬೇರೆ ಬೇರೆಯಾಗಿ ಡಿವೈಡ್ ಮಾಡಿ, ಇದನ್ನು ಮಾಡಲಿಕ್ಕೆ ಸಾಧ್ಯವೇ ಎನ್ನುವುದನ್ನೂ ಸಹಿತ ನಾವು ವಿಚಾರ ಮಾಡುತ್ತಿದ್ದೇವೆ. ಇನ್ನು ಮೂರು ತಿಂಗಳೊಳಗಡೆ ಈ ಬಗ್ಗೆ ನಾವು ಒಂದು ನಿರ್ಧಾರಕ್ಕೆ ಬರುವವರಿದ್ದೇವೆ.

<u>ಮೈಸೂರು ಬಿತ್ತನೆ ಪ್ರದೇಶದ ರೇಷ್ಮೆ ಅಭಿವೃದ್ಧಿ :</u>

254 (3111) ಶ್ರೀ ನಿಂಗಪ್ಪ ಹೆಚ್. (ಕುಣಿಗಲ್) :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಬಿತ್ತನೆ ತಳಿ ರೇಷ್ಮೆ ಅಭಿವೃದ್ಧಿ ಮತ್ತು ಗೂಡಿನ ಗುಣಮಟ್ಟ ಸುಧಾರಣೆ ಬಗ್ಗೆ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಆ) ಈ ಬಗ್ಗೆ ವಿಶೇಷ ಪ್ಯಾಕೇಜ್ ಕಾರ್ಯಕ್ರಮ ಅಳವಡಿಸಿಕೊಂಡು ಬಿತ್ತನೆ ಪ್ರದೇಶದ ಅಭಿವೃದ್ಧಿಗೆ ಸರ್ಕಾರ ಮುಂದಾಗುವುದೇ;

ಇ) ಬಿತ್ತನೆ ಪ್ರದೇಶದ ಮಾರುಕಟ್ಟೆಗಳಲ್ಲಿ ದಳ್ಳಾಳಿಗಳ ಹಾವಳಿ ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?